Date : 24-9-2015

# ಭತ್ತದ ಕಟಾವಿನ ಸಮಯದಲ್ಲಿ ಪಂಜಾಬ್‌ನಲ್ಲಿ ಬಿರುಸಿನ ಮಳೆ

ಪಂಜಾಬ್‌ನ ಪ್ರಮುಖ ಭತ್ತ ಬೆಳೆಯುವ ಪ್ರದೇಶಗಳಲ್ಲಿ ಹಾಗೂ ಹರ್ಯಾಣದ ಕೆಲವು ಭಾಗಗಳಲ್ಲಿ ಭತ್ತದ ಕಟಾವಿಗೆ ತಯಾರಾಗಿರುವ ಸಮಯದಲ್ಲಿ ಇತ್ತೀಚೆಗೆ ಬಿರುಸಿನ ಮಳೆಯಾಗಿದ್ದು, ರೈತರಲ್ಲಿ ಆತಂಕ ಮೂಡಿಸಿದೆ. ಬಿರುಸಿನ ಮಳೆಯಿಂದ ಈ ಪ್ರದೇಶಗಳಲ್ಲಿ ಭತ್ತದ ಬೆಳೆಗೆ ಹಾನಿ ಸಂಭವಿಸುವ ಭೀತಿಯುಂಟಾಗಿದೆ. ಪ್ರಮುಖ ಕೃಷಿ ಬೆಳೆ ಉತ್ಪಾದಿಸುವ ಈ ಎರಡು ರಾಜ್ಯಗಳಲ್ಲಿ ಈ ಹಿಂದೆ ಮಾರ್ಚ್–ಎಪ್ರಿಲ್ ತಿಂಗಳುಗಳಲ್ಲಿ ಅಕಾಲಿಕ ಮಳೆಯಿಂದ ಗಣನೀಯ ಪ್ರಮಾಣದ ಬೆಳೆಹಾನಿ ಸಂಭವಿಸಿತ್ತು. ಮುಂಗಾರಿನ ಕೊನೆಯಲ್ಲಿ ಈಗ ಸುರಿದ ಬಿರುಮಳೆ ರೈತರ ಆತಂಕ ಹೆಚ್ಚಳಗೊಳಿಸಿದೆ. ಭತ್ತದ ಕಟಾವಿಗೆ ತಯಾರಾದ ಈ ಸಂದರ್ಭದಲ್ಲಿ ಸುರಿದ ಬಿರುಮಳೆಯಿಂದ ಭತ್ತದ ಗುಣಮಟ್ಟ ಕುಸಿಯಬಹುದು ಮತ್ತು ಪೈರಿನ ತೇವಾಂಶ ಹೆಚ್ಚಳಗೊಂಡು ಹಾನಿಯಾಗಬಹುದು. ಬಾಸ್ಮತಿಯ ಸಮೇತ ಇತರ ಭತ್ತದ ಬೆಳೆ ಈಗ ಕಟಾವಿಗೆ ತಯಾರಾಗಿ ನಿಂತಿದೆ. ಈಗಿನ ಮಳೆ ಬೆಳೆಗೆ ಪೂರಕವಲ್ಲ ಮತ್ತು ಪಂಜಾಬ್‌ನಲ್ಲಿ ಮಳೆಯೊಂದಿಗೆ ಬಿರುಗಾಳಿ ಬಂದಿರುವುದರಿಂದ ಹೆಚ್ಚಿನ ಬೆಳೆಹಾನಿಯ ಭೀತಿಯಿದ್ದು ಇಳುವರಿ ಬಾಧಿತವಾಗುವ ನಿರೀಕ್ಷೆ ಇದೆ ಎಂದು ಭಾರತೀಯ ಕಿಸಾನ್ ಯೂನಿಯನ್‌ನ (ರಾಜೆವಾಲ್) ಅಧ್ಯಕ್ಷ ಬರಬೀರ್‌ಸಿಂಗ್ ರಾಜೆವಾಲ್ ಹೇಳಿದ್ದಾರೆನ್ನಲಾಗಿದೆ. ಈ ಎರಡು ರಾಜ್ಯಗಳಲ್ಲಿ ಜೂನ್‌ನಿಂದ ಸಪ್ಟೆಂಬರ್ 15ರ ತನಕದ ಮುಂಗಾರು ಮಳೆಯ ಕೊರತೆ 40 ಶೇಕಾಡಾವಾಗಿತ್ತೆನ್ನಲಾಗಿದೆ. ಆಗಸ್ಟ್ ಮತ್ತು ಸಪ್ಟೆಂಬರ್‌ನ ಆದಿಭಾಗಗಳಲ್ಲಿ ಮಳೆ ಕಡಿಮೆಯಾಗಿರುವುದರಿಂದ ಜೂನ್‌ನಿಂದ ಸಪ್ಟೆಂಬರ್‌ವರೆಗಿನ ಅವಧಿಯಲ್ಲಿ ಮಳೆಯ ಕೊರತೆಯಾಗಿದೆಯೆನ್ನಲಾಗಿದೆ.